## ಕಳೆದ ಸಂಚಿಕೆಯಲ್ಲಿ



ಶ್ರೀನಿವಾಸರಾಯರು ಮತ್ತು ಸರೋಜಮ್ಮನವರ ಪ್ರೇಮಕಥೆ ಕೇಳಿದ ಸದಾಶಿವ ಶೆಟ್ಟರು ತಾವು ನಡೆದುಬಂದ ಬದುಕಿನ ಕಥೆಯನ್ನು ನೆನಪಿಸಿಕೊಳ್ಳತೊಡಗಿದರು. ಇಬ್ಬರು ಅಣ್ಣಂದಿರ ನಂತರ ಜನಿಸಿದ ಸದಾಶಿವ ಅವರಿಗೆ ಹುಟ್ಟಿನಿಂದಲೇ ಕಾಲು ಊನ. ಪ್ರಾಯಕ್ಕೆ ಬಂದ ನಂತರ ಅಣ್ಣಂದಿರಿಬ್ಬರೂ ಹೋಟೆಲ್ ಆರಂಭಿಸಿದರೆ, ತಮ್ಮನಿಗೆ ಸ್ವಂತ ಕಾಲಿನ ಮೇಲೆ ನಿಲ್ಲುವ ಅವಕಾಶ ಮರೀಚಿಕೆಯಂತಾಯಿತು. ಅಣ್ಣಂದಿರ ಹೋಟೆಲ್‌ನಲ್ಲಿ ಕುಳಿತು ತನ್ನ ಸಾಮರ್ಥ್ಯ ಸಾಬೀತುಪಡಿಸಿದರೂ ಉಪಯೋಗವಾಗಲಿಲ್ಲ. ಮದುವೆಯಾದ ನಂತರ ಅಣ್ಣಂದಿರು ಮುಂಬೈ, ಪೂನಾದ ದಾರಿ ಹಿಡಿದ ನಂತರ ಹೋಟೆಲ್‌ನ ಜವಾಬ್ದಾರಿ ಸದಾಶಿವರಿಗೆ ಬಂತು; ಅದೂ ಅಣ್ಣಂದಿರಿಗೆ ತಿಂಗಳ ಬಾಡಿಗೆ ನೀಡುವ ಕರಾರಿನ ಮೂಲಕ. ಹೋಟೆಲ್ ವ್ಯಾಪಾರ ಕೈಹತ್ತಿ ಸದಾಶಿವ ಅವರೂ ಒಬ್ಬ ಮನುಷ್ಯನೆನ್ನಿಸಿಕೊಂಡರೂ ಅಣ್ಣಂದಿರ ಸಣ್ಣತನವೇನೂ ಕಡಿಮೆಯಾಗಲಿಲ್ಲ. ಗೆಳೆಯನ ಈ ಕಥೆಯನ್ನು ಕೇಳಿಸಿಕೊಂಡ ನಂತರ ಶ್ರೀನಿವಾಸರಾಯರಿಗೆ ಜಯಂತಿ ಬರೆದ ಪತ್ರದ ನೆನಪಾಯಿತು. ಆಕೆಗೆ ಸಾಂತ್ವನ ಹೇಳಲು ಅವರು ನಿರ್ಧರಿಸಿದರು.

ಮತ್ತು ಅವಳ ಗಂಡಂದಿರು ಚೆನ್ನಾಗಿದ್ದರೆ ಆಮೇಲೆ ಸಾಗುವಳಿಯ ವಿಚಾರದಲ್ಲಿ ಅಂದರೆ ಒಬ್ಬ ಕಬ್ಬು ಬೆಳೆಸುವ ಅಂದರೆ ಇನ್ನೊಬ್ಬ ಭತ್ತ ಬೆಳೆಸುವ ಎಂದು ಜಗಳ ಕಾದರಂತೆ. ಹೀಗೆ ಪರಸ್ಪರ ಭಿನ್ನಾಭಿಪ್ರಾಯ ಹುಟ್ಟಿ ಅದು ವೈಮನಸ್ಸಿಗೆ ಕಾರಣವಾಗಿ ಇಬ್ಬರೂ ತಂಗಿಯಂದಿರು ನಮ್ಮಣ್ಣನಿಗೆ ಪತ್ರ ಬರೆದು 'ನೀನು ಊರಿಗೆ ಬರಲೇಬೇಕು' ಎಂದು ಒತ್ತಾಯಿಸಿದಾಗ, ಅಣ್ಣನಿಗೂ ಈ ಮಿಲಿಟರಿ ಜೀವನ ಸಾಕು ಅಂತ ಅನಿಸಿತ್ತು ಎಂದು ಕಂಡಿತೋ ಏನೋ! ಜೊತೆಗೆ ಆತನಿಗೆ ಮದುವೆಯೂ ಆಗಿರಲಿಲ್ಲ. ಅಪ್ಪ ಅಮ್ಮ ಅವನಲ್ಲಿ ಮದುವೆಯಾಗು ಎಂದು ಹೇಳಿದರೆ 'ನಮ್ಮಂತಹ ಸೈನಿಕರಿಗೆ ಮದುವೆ ಗಿದುವೆಯ ಆಸೆ ಇರುವುದಿಲ್ಲ' ಎನ್ನುತ್ತಿದ್ದನಂತೆ. ಆಮೇಲೆ 'ನನಗೆ ಆಕಸ್ಮಿಕವಾಗಿ ಏನಾದರೂ ಆದರೆ ನನ್ನನ್ನು ಕಟ್ಟಿಕೊಂಡವಳ ಗತಿಯೇನು?' ಎನ್ನುವುದೂ ಇತ್ತಂತೆ. ಆಗ ಅಮ್ಮ 'ಮಿಲಿಟರಿಗೆ ಹೋದವರು ಎಷ್ಟು ಜನ ಮದುವೆಯಾಗಿದ್ದಾರೆ ಎಂದು ನಿನಗೆ ಗೊತ್ತಾ?' ಎಂದು ಹೇಳಿ, 'ನಿನ್ನ ಅಪ್ಪನ ಸೋದರ ಸೊಸೆಯೊಬ್ಬಳು ಕುಂದಾಪುರದಲ್ಲೇ ಟೀಚರ್ ಕೆಲಸದಲ್ಲಿದ್ದಾಳೆ. ನೀನು 'ಹ್ಞೂ' ಅಂದರೆ ಅಪ್ಪ ಮದುವೆ ಮಾತನಾಡಿಸುತ್ತಾರೆ' ಎಂದಿದ್ದರಂತೆ. ಆಗ ಅವನು 'ಹೋಗಮ್ಮ ನಾನೀಗ ನೆಮ್ಮದಿಯಾಗಿದ್ದೇನೆ. ಇನ್ನು ಸಂಸಾರ ಎಂದು ಹೊರಟರೆ ಏನೇನೆಲ್ಲ ಆಗುತ್ತದೆ' ಎಂದದ್ದಷ್ಟೇ ಅಲ್ಲದೆ, ನಮ್ಮ ಮನೆಯ ಯಾವ ವಿಚಾರದಲ್ಲೂ ಆತ ಮೂಗು ತೂರಿಸುವುದು ಬಿಡಿ, ಕಾಳಜಿಯನ್ನು ವಹಿಸಲಿಲ್ಲವಂತೆ. ಮೂರೋ ಆರೋ ತಿಂಗಳಿಗೆ ಒಮ್ಮೆ ಆತ ಅಮ್ಮನಿಗೆ ಐದೋ ಹತ್ತೋ ಸಾವಿರ ರೂಪಾಯಿ ಕಳುಹಿಸಿ, 'ಇದನ್ನು ಗಂಟು ಕಟ್ಟಿ ಇಡಬೇಡ. ಖರ್ಚುಮಾಡು' ಎಂದು ಪತ್ರಿಸುವುದು ಬಿಟ್ಟರೆ ಉಳಿದ ದಿನಗಳಲ್ಲಿ ಅವನ ವಾರ್ತೆ ನಮ್ಮ ಮನೆಗೆ ಬರುತ್ತಲೇ ಇರಲಿಲ್ಲವಂತೆ ಎಂದೆಲ್ಲ ನಾನು ಅವರಿವರಿಂದ ಕೇಳಿದ್ದೆ.

ಇಂಥ ಅಣ್ಣನಿಗೆ ಈ ಇಬ್ಬರು ತಂಗಿಯಂದಿರಿಂದ ಆಸ್ತಿ ವಿಚಾರದಲ್ಲಿ ದೂರು ಬಂದಾಗ, ದೇವರು ಅವನಿಗೆ ಅದೆಂಥ ಬುದ್ಧಿ ಕೊಟ್ಟನೋ ಏನೋ, ಅವನು ಊರಿಗೆ ಬಂದು ಒಂದು ತಿಂಗಳ ಕಾಲ ಕುಂದಾಪುರದಲ್ಲಿ ಇದ್ದು 'ನೀವು ಅಕ್ಕತಂಗಿಯರು ಮೂರು ಪಾಲು ಮಾಡಿಕೊಳ್ಳಬೇಕು. ನನಗೆ ಭೂಮಿಯಲ್ಲಿ ಒಂದು ಚೂರೂ ಬೇಡ! ಎಂದು ಹೇಳಿ, 'ಸರೋಜಳನ್ನು ಬಿಟ್ಟು ಪಾಲು ಪಂಚಾಯತಿಕೆ ಇಲ್ಲ' ಎಂದನಂತೆ. ಅಷ್ಟೇ ಅಲ್ಲ, ನಾವು ಇದ್ದ ರಾಂಪುರಕ್ಕೂ ಆತ ಬಂದು ಈ ಎಲ್ಲಾ ವಿಷಯವನ್ನು ನನಗೆ ಹೇಳಿ – 'ಸರೋಜಾ, ನೀನು ಬೇರೆ ಜಾತಿಯವನನ್ನು ಮದುವೆ ಆಗಿದ್ದಿ ಎಂದು ನನಗೆ ಚೂರೂ ಬೇಸರ ಅಥವಾ ನೋವಿಲ್ಲ. ನಿನ್ನ ಬದುಕಿನ ನಿರ್ಧಾರದ ಹಕ್ಕು ನಿನ್ನದೇ. ನಾನದರಲ್ಲಿ ಪ್ರವೇಶಿಸುವುದಿಲ್ಲ' ಎಂದು, ಇವರ ಅಂದರೆ ನನ್ನ ಯಜಮಾನರ ಜೊತೆ ಎರಡು ರಾತ್ರೆ ತನ್ನ ಮಿಲಿಟರಿ ಜೀವನದ ಅನುಭವಗಳನ್ನು ವಿವರಿಸಿದ್ದ. ಆತ ಹೊರಡುವಾಗ 'ನೋಡು ಸರೋಜಾ. ನೀನು ಕುಂದಾಪುರಕ್ಕೆ ಬರಬೇಕು. ನಾನು ಯಾರಾದರೂ ವಕೀಲರನ್ನು ಇಟ್ಟುಕೊಂಡು ಪಾಲು ಪಂಚಾಯತಿಕೆ ಮಾಡಿಸುತ್ತೇನೆ. ನೀನು ಹಕ್ಕಿನಿಂದ ನಿನ್ನ ಪಾಲು ತೆಗೆದುಕೊಳ್ಳಬೇಕು' ಎಂದಿದ್ದ. ನಾನು 'ನೋಡೋಣ' ಎಂದೆ. ಆದರೆ ಆಗ ನನ್ನ ಈ ಯಜಮಾನರು 'ನೋ ನೋ ಇದು ಇಂಪಾಸಿಬಲ್. ನಾನು ಈ ವಿಚಾರದಲ್ಲೇ ಇಲ್ಲ. ಇವಳ ತಂಗಿಯಂದಿರೇ ಆ ಭೂಮಿ ಇಟ್ಟುಕೊಳ್ಳಲಿ' ಎಂದಿದ್ದರು. ಆದರೆ ಅಣ್ಣ ಕೇಳಲೇ ಇಲ್ಲ. 'ಬಾ ಹೋಗುವ' ಎಂದು ನನ್ನನ್ನು ಕರೆದ. 'ನನಗೂ ಹೋಗೋಣ ಎನ್ನುವ ಮನಸ್ಸಾಯಿತು. ಕುಂದಾಪುರಕ್ಕೆ ನಾನು ಹೋದರೆ ಅಲ್ಲಿ ರೋಹಿಣಿ ಶೆಣೈ ಇದ್ದರೆ ಆಕೆಯನ್ನು ನೋಡಬಹುದು. ನಮ್ಮ ಕಾಲೇಜಿಗೆ ಹೋಗಿ ನನಗೆ ಪಾಠ ಹೇಳಿದ ಲೆಕ್ಚರರ್ಸ್ ಇದ್ದರೆ ಅವರನ್ನು ಮಾತನಾಡಿಸಬಹುದು. ಮರವಂತೆಗೆ ಹೋಗಿ ಸಮುದ್ರದ ದಂಡೆಯಲ್ಲಿ ಎಂಜಾಯ್ ಮಾಡಬಹುದು ಎಂದುಕೊಂಡೆ. ಅದನ್ನೇ ಇವರಿಗೆ ಹೇಳಿದರೆ ಇವರು 'ನೀನು ಬೇಕಾದರೆ ಹೋಗು. ನಾನು ಬರುವುದಿಲ್ಲ' ಎಂದರು. ಅದನ್ನು ಕೇಳಿ ಅಣ್ಣ ನಿರಾಶೆಯಲ್ಲಿ ಹಿಂದಿರುಗಿದ.

ಭೂಮಿಯ ಪಾಲು ಪಂಚಾಯತಿಕೆ ನಡೆಯಲಿಲ್ಲ. ತಂಗಿಯರಿಬ್ಬರೂ ಈಗಲೂ ಒಂದೇ ಮನೆಯಲ್ಲಿದ್ದು ದಿನಾ ಜಗಳ ಗಿಗಳ ಮಾಡಿಕೊಂಡಿದ್ದಾರೆ ಎಂದು ಕೇಳಿದ್ದೇನೆ. ಅಣ್ಣ ಮಾತ್ರ ಮಿಲಿಟರಿಯಿಂದ ಸ್ವಯಂ ನಿವೃತ್ತಿ ಪಡೆದು ಸರಕಾರ ಕೊಟ್ಟ ಜಮೀನಿನಲ್ಲಿ ಪುಟ್ಟ ಮನೆಕಟ್ಟಿ ಕೃಷಿಗೆ ಮುಂದಾದ. ನಾನೂ ಇವರೂ ಒಮ್ಮೆ ಆತನಿದ್ದಲ್ಲಿಗೆ ಹೋದಾಗ, ನಾನು, 'ಇದೆಲ್ಲ ಯಾಕೆ ಅಣ್ಣ? ನನ್ನ ಪಾಲನ್ನು ನೀನೇ ತಗೋ. ಕುಂದಾಪುರದಲ್ಲೇ ಇರು' ಅಂದರೆ, 'ನಾನು ನನ್ನ ಸಂತೋಷಕ್ಕೆ ಇದನ್ನು ಮಾಡುತ್ತಿದ್ದೇನೆ. ಬೇರೆ ಯಾವ ಉದ್ದೇಶವೂ ನನ್ನಲ್ಲಿಲ್ಲ. ನನ್ನ ನಂತರ ಇದು ಯಾರಿಗೆ ಅಂದರೆ ಸರಕಾರಕ್ಕೇ ಸೇರಬೇಕು. ಅದರಾಚೆ ನಾನು ಯೋಚಿಸುವುದಿಲ್ಲ' ಎಂದಿದ್ದ. ಎಸ್.ಇ.ಝೆಡ್. ಮಂಗಳೂರಿಗೆ ಬಂದಾಗ ತನ್ನ ಜಮೀನು ಹೋಯಿತು ಅಂತ ಆತ ಪಶ್ಚಾತ್ತಾಪ ಪಡಲಿಲ್ಲ. ಆದರೆ ತಾನು ಮಾಡಿದ ಕೃಷಿ, ಆ ಸಂಬಂಧ ನೆಟ್ಟು ಬೆಳೆಸಿದ ಮರಗಿಡಗಳು ಹಾಳಾದುವು ಎಂದು ತುಂಬಾ ಚಿಂತಾಕ್ರಾಂತನಾಗಿದ್ದ. ಅದಕ್ಕಿಂತಲೂ ಹೆಚ್ಚು ತಲೆಮಾರುಗಳಿಂದ ಕುಡುಬಿ ಬಯಲನ್ನು ಸಮೃದ್ಧಗೊಳಿಸಿದ್ದ ಕುಡುಬಿ ಸಮುದಾಯವನ್ನು ಅದರಲ್ಲೂ ಮುಖ್ಯವಾಗಿ ಗಿರಿಯ ಗೌಡರನ್ನು ಮತ್ತು ಅವರ ಹೋರಾಟಕ್ಕೆ ತಾನು ಸಾಥ್ ನೀಡಿದ್ದನ್ನು ಸದಾ ನೆನಪಿಸಿಕೊಳ್ಳುತ್ತಿದ್ದ' ಎಂದು ಸರೋಜಮ್ಮ ಹೇಳುತ್ತಿರುವಷ್ಟರಲ್ಲಿ ರಾಯರು ನಡೆಸುತ್ತಾ ಬಂದ ಕಾರು ಸರೋಜಳ ಅಣ್ಣನ ಅಂಗಳದಲ್ಲಿ ನಿಂತಿತು.

ಕಾರು ನಿಂತ ಶಬ್ದ ಕೇಳಿ ಮನೆಯ ಒಳಗಿದ್ದ ಸರೋಜಳ ಅಣ್ಣ ಸುಧೀರ್ ಶೆಟ್ಟರು ಓದುತ್ತಿದ್ದ ಪತ್ರಿಕೆಯನ್ನು ಕೈಯಲ್ಲಿ ಹಿಡಿದುಕೊಂಡೇ ಬಾಗಿಲಿನಾಚೆ ಬಂದು, 'ಓ ಹೋ ಹೋ ಬರಬೇಕು ಭಾವ' ಎಂದು ರಾಯರನ್ನು ಸ್ವಾಗತಿಸಿದರು. ಅಂಗಳದ ಮೆಟ್ಟಲುಗಳಿಂದ ಕೆಳಗಿಳಿದ ಅವರು ರಾಯರ ಕೈ ಕುಲುಕಿ ಅಪರಿಚಿತರಾಗಿ ಬಂದ ಸದಾಶಿವ ಶೆಟ್ಟರಿಗೆ ಕೈಮುಗಿದರು. ನಿಧಾನವಾಗಿ ಅವರು ಸರೋಜಳ ಪಕ್ಕಕ್ಕೆ ಬಂದು ಅವಳ ಬೆನ್ನನ್ನು ನೀವಿ, 'ನಡೀರಿ ಎಲ್ಲರೂ ಒಳಗೆ ಹೋಗೋಣ' ಎಂದರು.

ಎಲ್ಲರೂ ಒಳಗೆ ಹೋಗಿ ಕುಳಿತುಕೊಳ್ಳುತ್ತಿದ್ದ ಹಾಗೆ 'ನನ್ನದು ಪುಟ್ಟ ಅಂದರೆ ಪುಟ್ಟ ಮನೆ. ಒಂದು ಬೆಡ್ ರೂಮು, ಒಂದು ಕಿಚನ್, ಇನ್ನೊಂದು ಬಾತ್‌ರೂಮು ಬಿಟ್ಟರೆ ಸ್ವಲ್ಪ ದೊಡ್ಡದು ಎನ್ನಬಹುದಾಗಿರುವುದು ಈ ಚಾವಡಿ ಮಾತ್ರ' ಎಂದು ಸದಾಶಿವಶೆಟ್ಟರಿಗೆ ಹೇಳಿದ. ಅವರು 'ನಾನು ಒಬ್ಬನೇ ಒಬ್ಬ ಇರುವುದು ಈ ಮನೆಯಲ್ಲಿ! ನನಗೆ ಹೇಳಿಕೇಳಿ ಯಾವ ಬಯಕೆಗಿಯಕೆ ಇಲ್ಲ. ಊಟವೂ ಆಗುತ್ತದೆ, ಉಪವಾಸವೂ ಇರಬಲ್ಲೆ' ಎಂದು ತನ್ನ ಪರಿಚಯವನ್ನು ಸದಾಶಿವ ಶೆಟ್ಟರಿಗೆ ಮಾಡಿಕೊಟ್ಟು, 'ಉಳಿದದ್ದೆಲ್ಲ ತನ್ನ ತಂಗಿ ಸರೋಜ ನಿಮಗೆ ಹೇಳಿರಬಹುದು' ಎಂದರು.

'ಹೌದು, ನಿಮ್ಮ ತಂಗಿ ಎಲ್ಲವನ್ನೂ ಹೇಳಿದ್ದಾರೆ. ಈಗ ದಾರಿಯುದ್ದಕ್ಕೂ ನಾವು ನಿಮ್ಮ ವಿಚಾರವನ್ನೇ ಮಾತನಾಡಿದ್ದು' ಎಂದರು ಶೆಟ್ಟರು.

ಸುಧೀರ್ ಶೆಟ್ಟರು 'ಆಗಲಿ ಒಳ್ಳೆ ಕೆಲಸ ಮಾಡಿದ್ದಾಳೆ ಈ ಸರೋಜ!. ಹಾಗಾದರೆ ನಾನು